ಇತರೆ ಆಸಕ್ತ ರೈತರಿಗೂ ಸಹ ಸರ್ಕಾರ ನಿಗಧಿಪಡಿಸಿದ ಬೆಲೆಯಲ್ಲಿ ಹಂದಿ ಮರಿಗಳನ್ನು ನೀಡಲಾಗುತ್ತಿದೆ.

669 (816) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :- ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆ ವತಿಯಿಂದ ನಡೆಸಲಾಗುತ್ತಿರುವ ಪಶುಚಿಕಿತ್ಸಾಲಯ/ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು ;

(ಆ) ಇಂದಿನ ಪಶುಸಂಪತ್ತಿನ ಯಶಸ್ವಿ ನಿರ್ವಹಣೆಗಾಗಿ ಇನ್ನೂ ಸ್ಥಾಪಿಸಬೇಕಾದ ಪಶುಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಇದನ್ನು ಪೂರೈಸಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು ?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) :-

(ಅ) ರಾಜ್ಯದಲ್ಲಿ ಒಟ್ಟಾರೆ 3947 ಪಶುಚಿಕಿತ್ಸಾ ಕೇಂದ್ರಗಳಿವೆ. ಅವುಗಳ ವಿವರ ಈ ಕೆಳಗಿನಂತಿದೆ :-

(1)	ಪಶು ಆಸ್ಪತ್ರೆ	345
(2)	ಪಶುಚಿಕಿತ್ಸಾಲಯಗಳು	1762
(3)	ಸಂಚಾರಿ ಪಶುಚಿಕಿತ್ಸಾಲಯಗಳು	174
(4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	1198
(5)	ಕೃತಕ ಗರ್ಭಧಾರಣಾ ಕೇಂದ್ರ	400
(6)	ಪ್ರಧಾನ ಗ್ರಾಮೀಣಾಭಿವೃದ್ಧಿ ಯೋಜನೆ	06
(7)	ಪ್ರಾದೇಶಿಕ ಪ್ರಯೋಗ ಶಾಲೆ	03
(8)	ಇತರೆ	59
	ಒಟ್ಟು	3947

(ಆ) 1976ರ ರಾಷ್ಟ್ರೀಯ ಕೃಷಿ ಆಯೋಗದ ನೀತಿಯನುಸಾರ ಪ್ರತಿ 5000 ಜಾನುವಾರು ಘಟಕಗಳಿಗೆ ಪಶುವೈದ್ಯರಿರುವ ಒಂದು ಸಂಸ್ಥೆಯು ಇರಬೇಕಾಗುತ್ತದೆ. ರಾಜ್ಯದಲ್ಲಿ ಒಟ್ಟು 1,50,63,925 ಜಾನುವಾರು ಘಟಕಗಳಿದ್ದು, 3012 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿತ್ತು. ಆದರೆ ಪ್ರಸ್ತುತ 3947 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಡಾ: ಡಿ.ಎಂ. ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯ ಪ್ರಕಾರ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ, ಯಾವ ತಾಲ್ಲೂಕುಗಳಲ್ಲಿ ಪಶುವೈದ್ಯ ಸಂಸ್ಥೆಗಳು ಕೊರತೆ ಇವೆಯೋ, ಆ ತಾಲ್ಲೂಕುಗಳಲ್ಲಿ ಮಾತ್ರ ಇನ್ನೂ 249 ಪಶುಚಿಕಿತ್ಸಾಲಯಗಳನ್ನು ಸ್ಥಾಪಿಸಬೇಕಾಗಿರುತ್ತದೆ. ಆದರೆ ಪಶುವೈದ್ಯ ಸಂಸ್ಥೆಗಳು ಕೊರತೆ ಇರದ

ತಾಲ್ಲೂಕುಗಳಲ್ಲಿ ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಸರ್ಕಾರದ ಮುಂದೆ ಇರುವುದಿಲ್ಲ.

(ಇ) ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಯಾವುದೇ ಕಾಲಮಿತಿಯನ್ನು ನಿಗದಿಗೊಳಿಸಿರುವುದಿಲ್ಲ. ಆದರೆ ಡಾ: ಡಿ.ಎಂ. ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯಲ್ಲಿನ ಶಿಫಾರಸ್ಸಿನನ್ವಯ 8 ವರ್ಷಗಳ ಅವಧಿಯಲ್ಲಿ ಮಾಡಬಹುದಾಗಿದೆ.

ವಿಸ್ತರಣಾಧಿಕಾರಿಗಳ ಹುದ್ದೆ ಮೇಲ್ದರ್ಜೆಗೇರಿಸುವುದು

670 (1137) ಶ್ರೀಮತಿ ಶಕುಂತಲೆ ಟಿ. ಶೆಟ್ಟಿ (ಪುತ್ತೂರು) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹಿಂದುಳಿದ ವರ್ಗಗಳ ಇಲಾಖೆಯ ವಿಸ್ತರಣಾಧಿಕಾರಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ (ಉನ್ನತೀಕರಿಸುವ) ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ ಯಾವಾಗ ಕಾರ್ಯಗತಗೊಳಿಸಲಾಗುವುದು ; ವಿವರ ಒದಗಿಸುವುದು ;

(ಇ) ಪುತ್ತೂರು ಕ್ಷೇತ್ರದಲ್ಲಿರುವ ಮೇಲ್ವಿಚಾರಕರ ವಾರ್ಡನ್ ಮತ್ತು ಅಡಿಗೆಯವರ ಹುದ್ದೆಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ;

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :–

(ಅ) ಹೌದು.

(ಆ) ಹಿಂದುಳಿದ ವರ್ಗಗಳ ಇಲಾಖೆಯಲ್ಲಿರುವ 176 ತಾಲ್ಲೂಕುಗಳಲ್ಲಿನ ವಿಸ್ತರಣಾಧಿಕಾರಿಗಳ ಹುದ್ದೆಯ ವೇತನ ಶ್ರೇಣಿಯನ್ನು ರೂ. 5200–9580 ರಿಂದ 6000–11200 ವೇತನ ಶ್ರೇಣಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

(ಇ) ಪುತ್ತೂರು ಕ್ಷೇತ್ರದಲ್ಲಿರುವ ಮೇಲ್ವಿಚಾರಕರ ವಾರ್ಡನ್ ಮತ್ತು ಅಡುಗೆಯವರ ಹುದ್ದೆಗಳ ಸಂಖ್ಯೆ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.